ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE: 11/1/21

### ಬುಧವಾರ ಮಧ್ಯಾಹ್ನ ಅಥವಾ ಗುರುವಾರ ಬೆಳಗ್ಗೆ ಪ್ರಮಾಣವಚನ ಮುಹೂರ್ತ

# ಸಂಕ್ರಾಂತಿ ಗಿಫ್ಟ್ ಸಂಪುಟ ಫಿಕ್ಸ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು / ನವದೆಹಲಿ

ದೀರ್ಘಾವಧಿಯ ಅನಿಶ್ಚಿತತೆ ಬಳಿಕ ಸಚಿವ ಸಂಪುಟ ವಿಸ್ತರಣೆಗೆ ಕಾಲ ಕೂಡಿ ಬಂದಿದ್ದು, ಸಂಕ್ರಾಂತಿ ಹಬ್ಬದ ಮುನ್ನಾ ದಿನ ಬುಧವಾರ ಸಂಜೆ ಅಥವಾ ಗುರುವಾರ ಬೆಳಗ್ಗೆ ಸಚಿವ ಸಂಪುಟ ವಿಸ್ತರಣೆಯಾಗಲಿದೆ.

» ಯಡಿಯೂರಪ್ಪ ಅಮಿತ್ ಷಾ ಭೇಟಿ ಸಕ್ಸಸ್

## ಸಂಭಾವ್ಯರು

1. ಮುನಿರತ್ನ
2. ಎಂಟಿಬಿ ನಾಗರಾಜ್
3. ಆರ್. ಶಂಕರ್
4. ಸಿ.ಪಿ. ಯೋಗೇಶ್ವರ್
5. ಉಮೇಶ್ ಕತ್ತಿ
6. ಅರವಿಂದ ಲಿಂಬಾವಳಿ/ಹಾಲಪ್ಪ ಆಚಾರ್
7. ರಾಜೂಗೌಡ/ಸುನೀಲ್ ಕುಮಾರ್

ವರಿಷ್ಠರ ಆಹ್ವಾನದ ಮೇರೆಗೆ ದಿಢೀರ್ ದೆಹಲಿಗೆ ಹೋಗಿ ಬಂದಿರುವ ಸಿಎಂ ಬಿಎಸ್‌ವೈ ಆಕಾಂಕ್ಷಿಗಳಿಗೆ ಸಂಕ್ರಾಂತಿ ಸಿಹಿ ಹೊತ್ತು ತಂದಿದ್ದಾರೆ. ಖಾಲಿ ಇರುವ ಏಳು ಸ್ಥಾನಗಳ ಭರ್ತಿಗೆ ವರಿಷ್ಠರು ಹಸಿರು ನಿಶಾನೆ ತೋರಿಸಿದ್ದು, ಯಾರೆಲ್ಲ ಶಾಸಕರಿಗೆ ಅದೃಷ್ಟ ಖುಲಾಯಿಸಲಿದೆ ಎನ್ನುವುದು ಸೋಮವಾರ ಗೊತ್ತಾಗಲಿದೆ. ಜ.14ಕ್ಕೆ ಸಂಕ್ರಮಣ ಹಬ್ಬವಿರುವ ಕಾರಣ ಒಂದು ದಿನ ಮುಂಚೆಯೇ ಬಿಎಸ್‌ವೈ ಸಂಪುಟದ ಪಥ ಬದಲಾಗಲಿದ್ದು, ಪೂರ್ಣ ಪ್ರಮಾಣದಲ್ಲಿ ಮೈದುಂಬಿಕೊಳ್ಳಲಿದೆ. ಹಾಗೆಯೇ ವರಿಷ್ಠರು ಹೊರಡಿಸಿದ ಫರ್ಮಾನಿನ ಪ್ರಕಾರ ಸಂಪುಟ ಸೇರಲಿರುವವರ ಪಟ್ಟಿ ಹೊರಬೀಳಲಿದ್ದು, ಬಿಎಸ್‌ವೈಗೂ ಸ್ವಲ್ಪಮಟ್ಟಿಗೆ ಭಾರ ತಗ್ಗಲಿದೆ. ಆದರೂ ಸಂಭಾವ್ಯ ಅಸಮಾಧಾನ ಬಗೆಹರಿಸುವ ಜವಾಬ್ದಾರಿ, ನಿಭಾಯಿಸುವ ಛಾತಿ ಬಿಎಸ್‌ವೈ ಹೊಂದಿದ್ದು, ಎಲ್ಲರ ಮನವೊಲಿಸುವ ವಿಶ್ವಾಸದಲ್ಲಿದ್ದಾರೆ.

೦ಪುಟ 3



ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾನುವಾರ ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿಯಾದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಇದ್ದರು.

## ಯಾರಿಗೆ ಹೊಡೆಯುತ್ತೆ ಲಕ್?

ವರಿಷ್ಠರ ಜತೆಗೆ ಚರ್ಚೆಗೆ ತೆರಳಿದ್ದ ಯಡಿಯೂರಪ್ಪ, ಯಾರೆಲ್ಲ ಸಂಪುಟಕ್ಕೆ ಸೇರಬೇಕೆಂದು ಪ್ರಸ್ತಾವನೆ ಇಟ್ಟಿದ್ದರು. ಮಹತ್ವದ ಬೆಳವಣಿಗೆಯಲ್ಲಿ ಇಡೀ ಪಟ್ಟಿಗೆ ಸಹಮತ ವ್ಯಕ್ತವಾಗಿಲ್ಲ. ಆದರೆ, ಸರ್ಕಾರ ರಚನೆಗೆ ಕಾರಣರಾದವರ ಪೈಕಿ ಬಿಎಸ್‌ವೈ ಭರವಸೆ ಕೊಟ್ಟವರಿಗೆಲ್ಲ ಸಚಿವ ಸ್ಥಾನ ಖಚಿತ ಎನ್ನಲಾಗಿದೆ. ಇದೇ ವಿಚಾರವಾಗಿ ತಾವು ದೆಹಲಿಗೆ ತೆಗೆದುಕೊಂಡು ಹೋಗಿದ್ದ ಪಟ್ಟಿಯನ್ನು ನೋಡಿಕೊಂಡು ಪ್ರತಿಕ್ರಿಯೆ ನೀಡಿರುವ ಸಿಎಂ, ಒಂದೆರಡು ಹೆಸರು ವ್ಯತ್ಯಾಸವಾಗಲಿದೆ. ಉಳಿದಂತೆ ಭರವಸೆ ಕೊಟ್ಟವರಿಗೆಲ್ಲ ಅವಕಾಶ ಸಿಗಲಿದೆ ಎಂದು ಖಚಿತ ಮಾತುಗಳಲ್ಲಿ ಹೇಳಿದರು. ಪ್ರಮಾಣವಚನಕ್ಕೆ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಆಹ್ವಾನ ನೀಡಲಾಗಿದೆ ಎಂದರು.

## ಸಂಪುಟದ ಲೆಕ್ಕಾಚಾರ

- ಖಾಲಿಯಿರುವ 7 ಸಚಿವ ಸ್ಥಾನಗಳನ್ನು ಭರ್ತಿ ಮಾಡಿ ಸಚಿವ ಸಂಪುಟ ವಿಸ್ತರಿಸುವುದು
- ಉಪ ಚುನಾವಣೆಗಾಗಿ ಒಂದಿಬ್ಬರು ಸಚಿವರನ್ನು ಕೈಬಿಟ್ಟು, ಖಾಲಿ ಉಳಿಸಿಕೊಳ್ಳುವುದು
- ವರಿಷ್ಠರ ಸೂಚನೆಯಂತೆಯೇ ಸಂಪುಟದಿಂದ ಹೊರ ಬೀಳುವವರು ಯಾರೆಂಬುದನ್ನು ನಿರ್ಧರಿಸುವುದು
- ಎಂಟಿಬಿ ನಾಗರಾಜ್, ಆರ್. ಶಂಕರ್ ಹಾಗೂ ಮುನಿರತ್ನ ಅವರಿಗೆ ಅವಕಾಶ ಕಲ್ಪಿಸಿ ಕೊಟ್ಟ ಮಾತು ಉಳಿಸಿಕೊಳ್ಳುವುದು
- ಸಂಭವನೀಯ ಬಿಕ್ಕಟ್ಟು ಬಗೆಹರಿಸುವುದು ಬಿಎಸ್‌ವೈ ಜವಾಬ್ದಾರಿಯಾಗಿದೆ.

ವರಿಷ್ಠರ ಜತೆಗಿನ ಸಮಾಲೋಚನೆ ಬಳಿಕ ಏಳು ಶಾಸಕರಿಗೆ ಸಚಿವ ಸ್ಥಾನ ನೀಡಲು ಸಮ್ಮತಿ ದೊರೆತಿದೆ. ಹೊಸ ಮಂತ್ರಿಗಳು ಯಾರೆಂದು ಸೋಮವಾರ ತಿಳಿಸುವೆ.

। ಯಡಿಯೂರಪ್ಪ ಮುಖ್ಯಮಂತ್ರಿ

2

# ಸಂಕ್ರಾಂತಿ ಗಿಫ್ಟ್ ಸಂಪುಟ ಫಿಕ್ಸ್

**ಮೊದಲನೇ ಪುಟದಿಂದ...** ವಿ.ವಾ. 11-1-2021

ಕೇಂದ್ರ ಗೃಹ ಸಚಿವ ಅಮಿತ್ ಷಾ ಆಹ್ವಾನದ ಮೇರೆಗೆ ಭಾನುವಾರ ಬೆಳಗ್ಗೆಯೇ ದೆಹಲಿಗೆ ಬಂದಿದ್ದ ಬಿಎಸ್‌ವೈ, 'ಬಹಳ ಆಹ್ಲಾದಕರ ವಾತಾವರಣದಲ್ಲಿ ಸಭೆ ನಡೆದಿದ್ದು, ಸದ್ಯದಲ್ಲೇ ಶುಭ ಸುದ್ದಿ ಸಿಗಲಿದೆ' ಎಂದು ಸಭೆಯ ಬಳಿಕ ಮಾಹಿತಿ ನೀಡಿದ್ದರು. ಆದರೆ, ರಾತ್ರಿ 10.20ಕ್ಕೆ ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ, ದೆಹಲಿಯಿಂದ ಬಂದ ಕರೆಯೊಂದು ಪಕ್ಷದ ನಿರ್ಧಾರ ಪ್ರಕಟಿಸುವಂತೆ ಮಾಡಿತು.



'ಸಚಿವ ಸಂಪುಟಕ್ಕೆ ಏಳು ಮಂದಿ ಸೇರ್ಪಡೆಯಾಗಲಿದ್ದಾರೆ. ಏಳು ಶಾಸಕರಿಗೆ ಸಚಿವ ಸ್ಥಾನ ನೀಡಲು ವರಿಷ್ಠರು ಒಪ್ಪಿಗೆ ನೀಡಿದ್ದಾರೆ. ಜನವರಿ 13ರ ಮಧ್ಯಾಹ್ನ ನೂತನ ಸಚಿವರ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿದೆ. ಏಳು ಮಂದಿ ಯಾರೆಂದು ತಿಳಿಸುತ್ತಾರೆ. ಯಾರೆಲ್ಲ ಎಂಬುದನ್ನು ನಾನು ನಾಳೆ (ಸೋಮವಾರ) ಪ್ರಕಟಿಸುತ್ತೇನೆ' ಎಂದು ಸಿಎಂ ಮಾಧ್ಯಮಗಳಿಗೆ ತಿಳಿಸಿದರು.

ಬಹು ನಿರೀಕ್ಷಿತ ಸಚಿವ ಸಂಪುಟ ವಿಸ್ತರಣೆಗೆ ವರಿಷ್ಠರ ಸಮ್ಮತಿ ಬೆನ್ನಲ್ಲೇ ಆಕಾಂಕ್ಷಿಗಳ ಒತ್ತಡ ಹೆಚ್ಚಾಗುವ ಜತೆಗೆ ಪ್ರತ್ಯೇಕ ಸಭೆಗಳು ಶುರುವಾಗಿ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ತರುವ ಸಾಧ್ಯತೆಗಳಿವೆ. ಹೀಗಾಗಿ ಅನಗತ್ಯ ಗೊಂದಲ, ಅಸಮಾಧಾನ ಭುಗಿಲೇಳುವುದನ್ನು ತಪ್ಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ಎಚ್ಚರಿಕೆ ಹೆಜ್ಜೆ ಇಟ್ಟಿದ್ದಾರೆ. ಪಕ್ಷದ ವರಿಷ್ಠರೂ ಸಹ ಪ್ರತಿ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದು ವಿಶೇಷವಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಜ.16 ಮತ್ತು 17ರಂದು ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಇಲಾಖೆ ಕಾರ್ಯಕ್ರಮಗಳ ಜತೆಗೆ ಬೆಳಗಾವಿಯಲ್ಲಿ ಸಾರ್ವಜನಿಕ ಸಮಾರಂಭದಲ್ಲೂ ಅವರು ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಗೊಂದಲ, ವಿವಾದ ಸೃಷ್ಟಿಯಾಗುವುದು ಬೇಡ ಎನ್ನುವ ಲೆಕ್ಕಾಚಾರದಲ್ಲಿ ವರಿಷ್ಠರು ಸ್ಪಷ್ಟ ಸೂಚನೆ ನೀಡಿರುವುದರಿಂದ ಷಾ ದೆಹಲಿಗೆ ಹಿಂದಿರುಗಿದ ಬಳಿಕವೇ ಸಚಿವ ಸಂಪುಟ ವಿಸ್ತರಣೆಗೆ ಬಿಎಸ್‌ವೈ ಮುಹೂರ್ತ ನಿಗದಿಪಡಿಸುವ ಅಂದಾಜಿತ್ತು. ಆದರೆ, ಉಪ ಚುನಾವಣೆ ಯಾವುದೇ ಸಂದರ್ಭದಲ್ಲಿ ಘೋಷಣೆಯಾಗಬಹುದು ಎಂಬ ಅಂದಾಜಿನ ಮೇಲೆ ತಕ್ಷಣವೇ ಪ್ರಕ್ರಿಯೆ ಮಾಡಿ ಮುಗಿಸಲು ಸಿಎಂ ನಿರ್ಧರಿಸಿದರೆನ್ನಲಾಗಿದೆ.

**ಮಹತ್ವದ ಚರ್ಚೆ:** ಈ ಹಿಂದೆ ಸಂಪುಟ ವಿಸ್ತರಣೆ ವಿಚಾರ ಚರ್ಚಿಸಲು ದೆಹಲಿಗೆ ಬಂದಿದ್ದ ಬಿಎಸ್‌ವೈ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾರನ್ನಷ್ಟೇ ಭೇಟಿ ಆಗಿದ್ದರು. ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ರಾಜ್ಯಕ್ಕೆ ಭೇಟಿ ನೀಡಿದ್ದಾಗಲೂ ಸಂಪುಟ ವಿಸ್ತರಣೆ ಕುರಿತ ಚರ್ಚೆ ನಡೆದಿದ್ದವು. ಆದರೆ, ವರಿಷ್ಠರ ವಿಳಂಬ ಧೋರಣೆ ವಿವಿಧ ಊಹಾಪೋಹಗಳಿಗೆ ಕಾರಣವಾಗಿದ್ದವು. ಏತನ್ಮಧ್ಯೆ ಯಡಿಯೂರಪ್ಪರನ್ನು ಅಮಿತ್ ಷಾ ದಿಢೀರ್ ದೆಹಲಿಗೆ ಆಹ್ವಾನಿಸಿದ್ದು ಬಿಜೆಪಿ ವಲಯದಲ್ಲಿ ಹಲವು ಆಯಾಮದ ಚರ್ಚೆಗಳಿಗೆ ಕಾರಣವಾಗಿತ್ತು. ನಾಯಕತ್ವ ಬದಲಾವಣೆ ಕುರಿತ ಊಹಾಪೋಹ ಹರಿಯಬಿಡಲಾಗಿತ್ತು. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ನಾಯಕರೂ ಅಭಿಪ್ರಾಯಗಳನ್ನು ನೀಡಿದ್ದರು. ಆದರೆ, ಸಿಎಂ ಜತೆಗೆ ದೆಹಲಿಗೆ ಬಂದಿದ್ದ ಪಕ್ಷದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ನಾಯಕತ್ವದ ವಿಚಾರದಲ್ಲಿ ಗೊಂದಲವೇ ಇಲ್ಲ. ಆ ಗೊಂದಲ ಮಾಧ್ಯಮದಲ್ಲಿ ಮಾತ್ರ ಇದೆ ಎಂದು ಉತ್ತರಿಸಿ ವದಂತಿಗಳಿಗೆ ತೆರೆ ಎಳೆದರು.